(ಸಭೆಯು 2-30 ಗಂಟೆಗೆ ಪುನಃ ಸಮಾವೇಶ ಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರಾದ ಮಾನ್ಯಶ್ರೀ ಎಂ.ವಿ.ವೆಂಕಟಪ್ಪನವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಪ್ರಶ್ನೋತ್ತರ ವೇಳೆ)

3. ಬಿ.(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಿದ ಉತ್ತರಗಳು

ರಾಜ್ಯದಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಗೊಳಿಸುವುದು

123 (1266) ಶ್ರೀ ಎ.ರಾಮದಾಸ್ (ಕೃಷ್ಣರಾಜ್) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ ಮೂರು ವರ್ಷಗಳಲ್ಲಿ ಒಟ್ಟು ಎಷ್ಟು ಎಕರೆ ಹೊಸ ಪ್ರದೇಶಗಳಲ್ಲಿ ರೇಷ್ಮೆ ಕೃಷಿ ಕೈಗೊಳ್ಳಲಾಗಿದೆ?

ಆ. ಈ ಪ್ರದೇಶದ ರೇಷ್ಮೆ ಗೂಡಿನ ಒಟ್ಟು ಉತ್ಪಾದನೆ ಎಷ್ಟು?

ಇ. ಸರ್ಕಾರದ ಈ ಪ್ರದೇಶದ ಜಿಲ್ಲೆಗಳಿಗೆ ಕಳೆದ 3 ವರ್ಷಗಳಲ್ಲಿ ಮಾಡಿರುವ ವೆಚ್ಚವೆಷ್ಟು (ಅಂಶವಾರು ವಿವರ ನೀಡುವುದು)

ಈ. ಈ ಯೋಜನೆಯಿಂದ ರಾಜ್ಯಕ್ಕೆ ಆದ ಲಾಭ ವೆಷ್ಟು?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

ಅ. ಕಳೆದ ಮೂರು ವರ್ಷಗಳಲ್ಲಿ ಒಟ್ಟು 34,300 ಎಕರೆಯಷ್ಟು ಹೊಸ ಪ್ರದೇಶದಲ್ಲಿ ಹಿಪ್ಪುನೇರಳೆ ರೇಷ್ಮೆ ಕೃಷಿಯನ್ನು ಕೈಗೊಳ್ಳಲಾಗಿದೆ.

ಆ. ಈ ಪ್ರದೇಶದಲ್ಲಿ ಒಟ್ಟು ಅಂದಾಜು 13,314 ಮೆಟ್ರಿಕ್ ಟನ್ ರಷ್ಟು ರೇಷ್ಮೆ ಗೂಡು ಉತ್ಪಾದನೆಯಾಗಿರುತ್ತದೆ.

ಇ. ಸರ್ಕಾರವು ಈ ಪ್ರದೇಶದ ಜಿಲ್ಲೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾವಲಯ ಯೋಜನೆಯಡಿ ರೂ. 1,456 ಲಕ್ಷ ರಷ್ಟು ವೆಚ್ಚ ಮಾಡಿರುತ್ತದೆ. ಇದಲ್ಲದೆ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ರಾಜ್ಯ ವಲಯದಿಂದಲೂ ಸಹ ಜಿಲ್ಲೆಗಳಲ್ಲಿ ರೂ. 826 ಲಕ್ಷ ವೆಚ್ಚ ಮಾಡಲಾಗಿದೆ. ಅಂಶವಾರು ವಿವರ ಅನುಬಂಧದಲ್ಲಿ ನಮೂದಿಸಲಾಗಿದೆ.

ಈ. 1. ಕಳೆದ ಮೂರು ವರ್ಷಗಳಲ್ಲಿ ರೇಷ್ಮೆ ಕೃಷಿ ಅವಲಂಬಿಸಿರುವ 11,814 ಪರಿಶಿಷ್ಟ ಜಾತಿಯ ಹಾಗೂ 2,996 ಪರಿಶಿಷ್ಟ ಪಂಗಡದ ಜನರಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಕೊಡಲಾಗಿದೆ.

2. ಕಳೆದ ಮೂರು ವರ್ಷಗಳಲ್ಲಿ 34,300 ಎಕರೆಯಷ್ಟು ಹೊಸ ಹಿಪ್ಪುನೇರಳೆ ವಿಸ್ತೀರ್ಣದಿಂದ ಸುಮಾರು 1.78 ಲಕ್ಷ ಜನರಿಗೆ ರೇಷ್ಮೆ ಕೃಷಿಯಲ್ಲಿ ಉದ್ಯೋಗ ಅವಕಾಶ ಕಲ್ಪಿಸಿದಂತಾಗಿರುತ್ತದೆ.

ಅನುಬಂಧ

ಯೋಜನೆಯಡಿ ಹೆಚ್ಚಳ

ರೇಷ್ಮೆ ಇಲಾಖೆ (ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆ	1997-98	1998-99	1999-2000 ಫೆಬ್ರವರಿವರೆಗೆ)
	ಜಿಲ್ಲಾ ವಲಯ (ಜಿ.ಪ)			
1.	ರೇಷ್ಮೆ ಕೃಷಿಕ್ಷೇತ್ರಗಳು	30.87	33.65	20.29
2.	ಸಲಹಾ ಸೇವೆಗಳು, ಪ್ರಚಾರ	81.85	88.71	42.32
3.	ಮಹಿಳಾ ವ್ಯಾತ್ಯಕ್ಷತಾ ಕ್ಷೇತ್ರ	34.27	19.11	5.72
4.	ತರಬೇತಿ	39.45	41.71	25.85
5.	ಬೈಪೋಲ್ಟೈನ್ ಗೂಡಿಗೆ ಪ್ರೋತ್ಸಾಹ ಧನ	16.42	22.68	13.96
6.	ರೇಷ್ಮೆ ಹುಳು ಸಾಕುವ ಮನೆ ರೀಲಿಂಗ್ ಷೆಡ್ ಸಹಾಯಧನ	34.49	41.35	14.27
7.	ರೋಗ ನಿಯಂತ್ರಣ	131.08	149.35	104.30
8.	ರೀಲಿಂಗ್ ಶೆಡ್ ನಿರ್ಮಾಣ, ಗ್ರೋತ್‌ಸೆಂಟರ್	8.50	1.91	0.02
9.	ರೆಂಜ ಪದ್ಧತಿಗೆ ಸಹಾಯಧನ	6.58	10.42	8.99
10.	ವಿಶೇಷ ಘಟಕ ಯೋಜನೆ	87.04	103.27	61.11
11.	ಗಿರಿಜನ ಉಪಯೋಜನೆ	37.16	37.50	15.01
12.	ವಿಶೇಷ ಘಟಕ ಯೋಜನೆ-ಕೇಂದ್ರ ನೆರವು	40.74	11.59	20.80
13.	ಗಿರಿಜನ ಉಪಯೋಜನೆ-ಕೇಂದ್ರ ನೆರವು	8.01	6.00	0.58
	ಒಟ್ಟು (ಜಿಲ್ಲಾವಲಯ)	**555.76**	**567.25**	**333.22**
	ರಾಜ್ಯ ವಲಯ			
1.	ಮೈಸೂರು ಬಿತ್ತನೆ ಗೂಡಿಗೆ ಬೋನಸ್	171.67	89.79	49.99
2.	ರೋಗ ನಿಯಂತ್ರಣ ಕಾರ್ಯಕ್ರಮ (ಊಜಿ)	30.76	10.00	5.00
3.	ಬೈಪೋಲ್ಟೈನ್ ಗೂಡಿಗೆ ಪ್ರೋತ್ಸಾಹ ಧನ	137.72	57.76	49.94
4.	ವಿಶೇಷ ಘಟಕ ಯೋಜನೆ	98.84	49.89	26.73
5.	ಗಿರಿಜನ ಉಪಯೋಜನೆ	19.98	14.56	13.39
	ಒಟ್ಟು (ರಾಜ್ಯ ವಲಯ)	**458.97**	**222.00**	**145.05**

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ ನಾನು ಪ್ರಮುಖವಾಗಿ ಕೇಳಿದ್ದು ಹೊಸ ಏರಿಯಾಗಳಲ್ಲಿ ಹಿಪ್ಪುನೇರಳೆ ರೇಷ್ಮೆ ಕೃಷಿಯನ್ನು ಕೈಗೊಂಡಿರುವ ಬಗ್ಗೆ ಅದಕ್ಕೆ ತಾವು 34300 ಏಕರೆ ಪ್ರದೇಶದಲ್ಲಿ ಮಾಡುವ ವಿಚಾರವನ್ನು ಹೇಳಿದ್ದೀರಿ. ಕಳೆದ 10 ವರ್ಷಗಳಲ್ಲಿ ಹೊಸ ಪ್ರದೇಶಗಳಲ್ಲಿ ಇಂಥದೇ ಯೋಜನೆಗಳು ಎಷ್ಟರಮಟ್ಟಿಗೆ ಯಶಸ್ವಿಯಾಗಿವೆ ? ಹಾಗೂ 10 ವರ್ಷಗಳಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತು ಮಾಡಬೇಕೆನ್ನುವ ಗುರಿ ಸಾಧಿಸಿದ್ದೀರಿ ಹಾಗೂ ಈ ಯೋಜನೆ ಮೂಲಕ ನಿಮ್ಮ ಬಜೆಟ್‌ನಲ್ಲಿ ಹಾಕಿಕೊಂಡಿರುವಂತೆ ಯಾವ ವರ್ಗದವರಿಗೆ ಹೆಚ್ಚು ಫಲ ಲಭ್ಯವಾಗುತ್ತಿದೆ ಎಂಬ ವಿವರ ಕೇಳಬಯಸುತ್ತೇನೆ.

ಶ್ರೀ ಎಂ. ಮಹಾದೇವ್ : ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಲ್ಲಿ ಹೊಸನಾಡಿ ಕಾರ್ಯಕ್ರಮದಡಿ ಹಿಪ್ಪುನೇರಳೆ ಬೆಳೆ ತೆಗೆದ ವಿಸ್ತೀರ್ಣ ಹೀಗಿದೆ 1997-98ರಲ್ಲಿ 9503 ಹೆಕ್ಟೇರ್, 1998-99ರಲ್ಲಿ 13570 ಹೆಕ್ಟೇರ್‌ಗಳು, 99-2000ರಲ್ಲಿ 11277 ಹೆಕ್ಟೇರ್‌ಗಳು ಒಟ್ಟು 34300 ಹೆಕ್ಟೇರ್‌ನಲ್ಲಿ ಹಿಪ್ಪುನೇರಳೆ ಬೆಳೆಯುತ್ತಿದ್ದೇವೆ. ಈಗ ಉತ್ತರ ಕರ್ನಾಟಕದಲ್ಲಿ ರೇಷ್ಮೆ ಬೆಳೆಯನ್ನು ವಿಸ್ತರಿಸಲು ಮತ್ತು ಉತ್ತಮ ಬೆಳೆ ತೆಗೆಯುವುದಕ್ಕೆ ಹೊಸ ಬೆಳೆ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮೊದಲನೆಯದು ಮಳೆಯಾಶ್ರಯದ ಭೂಮಿಯಲ್ಲಿ ಹಿಪ್ಪುನೇರಳೆಯನ್ನು ಅದರಲ್ಲೂ ಬೈವೋಲ್ಟೀನನ್ನು ಬೆಳೆಯಲು ಸಾಧ್ಯವಾಗುವುದಿಲ್ಲ. ಎಲ್ಲೆಲ್ಲಿ ನೀರಾವರಿ ಸೌಕರ್ಯ ಇದೆ ಅಲ್ಲಿ ಬೈವೋಲ್ಟೀನ್ ಬೆಳೆದು ರೇಷ್ಮೆ ಉದ್ಯಮವನ್ನು ಜಾಸ್ತಿ ಮಾಡ ಬೇಕೆಂಬ ಉದ್ದೇಶವಿದೆ. ಆದ್ದರಿಂದ ಉತ್ತರ ಕರ್ನಾಟಕದಲ್ಲಿ ರೇಷ್ಮೆ ಬೆಳೆಗಾಗಿ ನೀರಾವರಿ ಸೌಲಭ್ಯ ಒದಗಿಸಲುನಾವು ಹೊರಟಿದ್ದೇವೆ. ನಮ್ಮ ಸರ್ಕಾರ ಹೊಸದಾಗಿ ರೇಷ್ಮೆ ಸಂಪತ್ತು ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಣ್ಣ ರೈತರು ಮತ್ತು ಮಧ್ಯಮವರ್ಗದ ರೈತರು ಹಾಗೂ ಅಂಗವಿಕಲರು, ಮಹಿಳೆಯರುಗಳಿಗೆ ಯಾರ್ಯಾರ ಜಮೀನು ಎಲ್ಲೆಲ್ಲಿವೆ ಅವುಗಳಲ್ಲಿ ಜಿಯಾಲಜಿಸ್ಟ್‌ಗಳಿಂದ ನೀರನ್ನು ಪತ್ತೆ ಮಾಡಿಸಿ ಅಲ್ಲಿ ನೀರು ಬರುವುದಾದರೆ ಅಲ್ಲಿ ಪಂಪುಸೆಟ್‌ಗಳನ್ನು ಅಳವಡಿಸಿ ಮತ್ತು ಹುಳು ಸಾಗಾಣಿಕೆ ಮನೆಗಳನ್ನು ಮಂಜೂರು ಮಾಡಿಕೊಟ್ಟು ಬೈವೋಲ್ಟೀನ್ ಕಡ್ಡಿಗಳನ್ನು ಕೊಟ್ಟು ಇತರೆ ಉಪಕರಣಗಳನ್ನೂ ಒದಗಿಸಿ ರೇಷ್ಮೆ ಬೆಳೆ ತೆಗೆಯುವ ಬಡಬಗ್ಗರಿಗೆ ಅನುಕೂಲ ಮಾಡಿಕೊಡಬೇಕೆಂದು ಇದನ್ನು ತಂದಿದ್ದೇವೆ. ಇದರಿಂದ ಕರ್ನಾಟಕದಲ್ಲಿ ರೇಷ್ಮೆ ಉದ್ಯಮ ಬೆಳವಣಿಗೆಗೆ ಹಾಗೂ ಬಡವರು ಆರ್ಥಿಕವಾಗಿ ಮುಂದೆ ಬರಲಿಕ್ಕೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಮತ್ತು ಹಿಂದುಳಿದ ವರ್ಗಕ್ಕೆ ಆರ್ಥಿಕವಾಗಿ ವರದಾನವಾಗಿದೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಮಾನ್ಯಸಚಿವರು ರೇಷ್ಮೆ ಬೆಳೆಯುವ ಜಿಲ್ಲೆಯಿಂದ ಬಂದವರೇ. ಆದರೆ ವಿಶ್ವಬ್ಯಾಂಕಿನಿಂದ ಸಾಲ ಪಡೆದು ಸಾಲಗಾರ ರಾಜ್ಯವಾದ ನಂತರವೂ ಮಾಡಿದ ಸಾಧನೆಯೇನು ಅಂದರೆ ಇವತ್ತಿನವರೆಗೆ ಕೊಟ್ಟಿರುವುದು ಕೇವಲ 1.75 ಲಕ್ಷ ಕುಟುಂಬಗಳಿಗೆ ಮಾತ್ರ. ಆದರೆ ಮಾನ್ಯ ಸಚಿವರು ಅಧಿಕಾರ ಸ್ವೀಕರಿಸಿದ ನಂತರ ಕೊಟ್ಟ ಮೂರು ಹೇಳಿಕೆಗಳೂ ನನ್ನ ಹತ್ತಿರ ಇವೆ. ಶೇಕಡ 50 ಭಾಗ ಎಲ್ಲಿ ಕೃಷಿ ಆರಂಭವಾಯಿತೋ ಅದೆಲ್ಲ ಸ್ಥಗಿತವಾಗಿದೆ, ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅವರನ್ನು ಪುನರುಜ್ಜೀವನ ಮಾಡುವ ವ್ಯವಸ್ಥೆಗೆ ಹೋಗುತ್ತಿದ್ದೇವೆ ಅಂತ ಹೇಳಿದ್ದಾರೆ. ಕೇವಲ

ದಾಖಲೆಗಳಲ್ಲಿ 1.75 ಲಕ್ಷ ಇದ್ದರೆ ಸಾಕಾ ಅನ್ನುವುದು, ಕಳೆದ ಮೂರು ವರ್ಷಗಳಲ್ಲಿ ನಿಮ್ಮ ಇಲಾಖಾ ಬಜೆಟ್‌ನ್ನು ನೋಡಿ : ಯಾವ ರೀತಿ ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿ ಆಗುತ್ತಿದೆ ಎಂದು ತಿಳಿಯುತ್ತದೆ. 1997-98ರಲ್ಲಿ 555 ಲಕ್ಷ, 98-99ರಲ್ಲಿ 567 ಲಕ್ಷ, 99-2000ರಲ್ಲಿ 333 ಲಕ್ಷ ರೂಗಳನ್ನು ನೀವು ಇಟ್ಟಿರುವ ಹಣ. ಅಂದರೆ ನಿಮ್ಮ ಹೂಡಿಕೆ ಪ್ರೋಗ್ರೆಸಿವಾಗಿದೆಯಾ ಇಲ್ಲವಾ ಅನ್ನುವುದು ಗೊತ್ತಾಗುತ್ತದೆ. ಈ ಹಿನ್ನೆಲೆಯಲ್ಲಿ ಸದನದಲ್ಲಿ ಅಂಕಿಅಂಶ ಕೊಡುವುದಷ್ಟೇ ಅಲ್ಲ, ಇದರ ಬಗ್ಗೆ ಸಮಗ್ರ ಚಿಂತನೆ ಆಗುವ ದೃಷ್ಟಿಯಿಂದ ಯಾಕೆ ಇದನ್ನು ಇದ್ದ ಪ್ರದೇಶದಲ್ಲಿ ಮುಚ್ಚುತ್ತಿದ್ದಾರೆ, ಯಾವ ಜಿಲ್ಲೆಗಳಲ್ಲಿ ರೇಷ್ಮೆ ಚಟುವಟಿಕೆ ಇಲ್ಲದ ಕಡೆ ಶೀತಲ ಗೃಹ ನಿರ್ಮಿಸುವುದಕ್ಕಾಗಿ ಹಣ ಖರ್ಚು ಮಾಡಿದ್ದಾರೆ ಇದರ ಬಗ್ಗೆ ಒಂದು ಸಮಿತಿಯನ್ನು ತಾವು ರಚನೆ ಮಾಡಿ ಆ ವರದಿ ಆಧಾರದ ಮೇಲೆ ನೀವು ಪ್ರಗತಿ ಸಾಧಿಸಿ ಅಂತ ನಾವು ಕಳಕಳಿಯಿಂದ ಕೇಳುತ್ತಿದ್ದೇವೆ. ಇಂತಹ ಹೇಳಿಕೆಗಳ ಅವಶ್ಯಕತೆ ಇಲ್ಲವೇನೋ ಅಂತ ನನಗನ್ನಿಸುತ್ತದೆ.

ಶ್ರೀ ಎಂ.ಮಹಾದೇವ್ : ಹಿಂದೆ ವಿಶ್ವಬ್ಯಾಂಕಿನಿಂದ 100 ಕೋಟಿ ರೂಪಾಯಿಗಳನ್ನು ಸಾಲ ಪಡೆದದ್ದು ನಿಜ. ಆಗೆಲ್ಲ ಅಭಿವೃದ್ಧಿ ಕಡೆ ಸರ್ಕಾರ ಗಮನಕೊಟ್ಟಿರಲಿಲ್ಲ. ಕಟ್ಟಡ ಮತ್ತು ವಾಹನಗಳ ಮೇಲೆ ಹೆಚ್ಚಿನ ಹಣ ವಿನಿಯೋಗಿಸಿದ್ದಾರೆ. ಆಗ ಫಾರ್ಮ್ ಅಭಿವೃದ್ಧಿ ಮಾಡಿದ್ದಿದ್ದರೆ ಬಹಳ ಅನುಕೂಲ ಆಗುತ್ತಿತ್ತು. ಅವರು ಒಳ್ಳೆಯ ಉದ್ದೇಶದಿಂದಲೇ ಮಾಡಿರಬಹುದೆಂದು ನಾವು ಭಾವಿಸುವುದಾದರೂ ಆ ಕಟ್ಟಡಗಳು ಇವತ್ತಿನ ಪರಿಸ್ಥಿತಿಗೆ ಉಪಯುಕ್ತವಾಗಿಲ್ಲ. ವಾಹನಗಳು ಸಹ ಸಮಸ್ಯೆ ಆಗಿವೆ. ಅಭಿವೃದ್ಧಿ ಕಡೆ ಹೆಚ್ಚು ಹಣ ಹೋಗಿಲ್ಲ. ಈಗ ನಾವೇನು ವಿಚಾರ ಮಾಡುತ್ತಿದ್ದೇವೆ ಅಂದರೆ ಸ್ಥಳೀಯವಾಗಿ ರೇಷ್ಮೆ ಕಡ್ಡಿ ಬೆಳೆದರೆ ಹೆಚ್ಚು ರೇಷ್ಮೆ ಉತ್ಪಾದಿಸಲು ಆಗುವುದಿಲ್ಲ. ಬೈವೋಲ್ಟೀನ್ ಬೆಳೆಯಬೇಕಾದರೆ ನೀರಾವರಿ ಸೌಲಭ್ಯ ಬೇಕಾಗುತ್ತದೆ. ಯಾವ್ಯಾವ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ಇದೆ ಎಲ್ಲೆಲ್ಲಿ ಬಾವಿ ಇದೆ ಎಂದು ನೋಡಿ ಅಲ್ಲಿ ಬೈವೋಲ್ಟೀನ್ ಬೆಳೆದರೆ ರೇಷ್ಮೆ ಅಭಿವೃದ್ಧಿ ಆಗಲು ಸಾಧ್ಯವಾಗುತ್ತದೆ. ಅದಕ್ಕಾಗಿ ನಾವು ಆ ಕಡೆ ವಿಚಾರ ಮಾಡುತ್ತಿದ್ದೇವೆ. ರೇಷ್ಮೆ ಒಂದು ಪ್ರಬಲ ಉದ್ಯಮವಾಗಬೇಕಾದರೆ ನಾವು ಹುಳು ಸಾಕಾಣಿಕೆಗೆ ಅನುಕೂಲ ಮಾಡಿಕೊಡಬೇಕು. ಒಳ್ಳೆಯ ಮೊಟ್ಟೆಗಳನ್ನು ಕೊಡಬೇಕಾಗುತ್ತದೆ. ಪೌಷ್ಠಿಕಾಂಶವುಳ್ಳ ಸೊಪ್ಪನ್ನು ಕೊಡಬೇಕು. 13 ಹೊಸ ವೈರೈಟಿಗಳನ್ನು ನಾವು ರೇಷ್ಮೆ ಕೇಂದ್ರದಲ್ಲಿ ಉತ್ಪಾದಿಸಿದ್ದೇವೆ. ಇದರ ಬಗ್ಗೆಯೆಲ್ಲ ರೈತನಿಗೆ ತರಬೇತಿ ಕೊಡಬೇಕಾಗುತ್ತದೆ. ಇದರ ಜೊತೆಗೆ ತಾಂತ್ರಿಕ ಜ್ಞಾನವನ್ನೂ ನೀಡಬೇಕು. ಜೊತೆಗೆ ಮಾರ್ಕೆಟಿಂಗ್ ಸೌಲಭ್ಯವನ್ನೂ ಕೊಡಬೇಕು. ತಾವೇನು ಸಲಹೆ ಕೊಟ್ಟಿದ್ದೀರಿ...

ಶ್ರೀ ಎ.ರಾಮದಾಸ್ : ಸಲಹೆಯಲ್ಲ, ನಾನು ನೇರವಾಗಿ ಕೇಳಿದೆ. ರೇಷ್ಮೆ ಇಲಾಖೆಯಲ್ಲಿ ಪ್ರಗತಿ ಮೈನಸ್ ಲೆಕ್ಕದಲ್ಲಿದೆ, ಅದಕ್ಕಾಗೇ ಈ ಸಲದ ಬಜೆಟ್‌ನಲ್ಲಿ ಹಣ ಕಡಿಮೆ ಮಾಡಿದ್ದಾರೇನೋ ಅಂತ ನನಗೆ ಅನ್ನಿಸುತ್ತದೆ. ಇದರ ಬಗ್ಗೆ ಒಂದು ತನಿಖೆ ಮಾಡಲು ನೀವು ಸಿದ್ಧವಾಗಿದ್ದೀರಾ ? ಅದರ ಬಗ್ಗೆ ಹೇಳಿ.

ಶ್ರೀ ಎಂ.ಮಹಾದೇವ್ : ಅದರ ಬಗ್ಗೆ ಪರೀಶೀಲನೆ ಮಾಡುತ್ತೇವೆ.

ಶ್ರೀ ಜಿ.ರಾಜುಗೌಡ: ಸ್ವಾಮಿ, ಪ್ರಶ್ನೆ ಇರುವುದು ಕಳೆದ ಮೂರು ವರ್ಷಗಳಲ್ಲಿ ಹೊಸ ಪ್ರದೇಶಗಳಲ್ಲಿ ಅಂತ. ಹೊಸ ಪ್ರದೇಶ ಅಂದರೆ ಮೈಸೂರು, ಬೆಂಗಳೂರು, ಕೋಲಾರ ಚಾಮರಾಜ

ಅಭಿವೃದ್ಧಿಪಡಿಸಿದ್ದೀರಾ ಎನ್ನುವುದು ಒಂದು, ಇದರ ಅಂಕಿಅಂಶ ಜಿಲ್ಲಾವಾರು ಕೊಡಬೇಕಾಗಿತ್ತು, ಅವರು ಕೊಡಲಿಲ್ಲ. ಎರಡನೆಯದು, ಯಾವ ಆಳತೆಗೋಲಿನ ಮೇಲೆ ತಾವು 13114 ಮೆಟ್ರಿಕ್‌ಟನ್ ಗೂಡು ಉತ್ಪಾದನೆ ಆಗಿದೆ ಅಂತ ಹೇಳುತ್ತೀರ, ದಯಮಾಡಿ ತಿಳಿಸಬೇಕು. ಮೂರನೆಯದು 34, 300 ಎಕರೆಯಲ್ಲಿ ಸುಮಾರು 1.78 ಲಕ್ಷ ಜನರಿಗೆ ರೇಷ್ಮೆ ಸೌಲಭ್ಯ ಕೊಡಲಾಗಿದೆ ಎಂದಿದ್ದೀರಿ, ಒಂದು ಎಕರೆಯಲ್ಲಿ ಎಷ್ಟು ಜನರಿಗೆ ಕೊಡಲು ಸಾಧ್ಯ ? ಒಂದು ಎಕರೆ ಹಿಪ್ಪುನೇರಳೆ ಬೆಳೆದರೆ ಅದು ಮೊಟ್ಟೆಯಿಂದ ಹಿಡಿದು ರೇಷ್ಮೆಯಾಗುವತನಕ ಒಂದು ಎಕರೆಗೆ ಎಷ್ಟು ಜನರಿಗೆ ಉದ್ಯೋಗ ಕೊಡಲು ಸಾಧ್ಯ ?

ಶ್ರೀ ಎಂ. ಮಹಾದೇವ್ : ಮೊಟ್ಟೆ ಉತ್ಪಾದನೆ ಆಧಾರದ ಮೇಲೆ ಇಷ್ಟು ಗೂಡು ಆಗುತ್ತದೆ ಅಂತ ಹೇಳುತ್ತೇನೆ. ತಮಗೂ ಅನುಭವ ಇದೆ. 93ನೇ ಸಾಲಿನ ಆಧಾರದ ಮೇಲೆ ನಾವು ಇಷ್ಟು ಜನರಿಗೆ ಉದ್ಯೋಗವಕಾಶ ಕೊಟ್ಟಿದ್ದೇವೆ. ಅದನ್ನು ಉತ್ತಮಪಡಿಸಬೇಕೆಂದು ತಾವು ಸಲಹೆ ಕೊಡುತ್ತಿದ್ದೀರಿ. ಸರ್ಕಾರ ಅದನ್ನು ಇಂಪ್ರೂವ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಶಿವಮೊಗ್ಗದಲ್ಲಿ ಬಹಳ ಒಳ್ಳೆಯ ಕಟ್ಟಡಗಳು ಬಂದಿದೆ. ಆದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಇಲಾಖೆಯವರು ಖರ್ಚು ಮಾಡಿದ್ದಾರೆ. ಅಧಿಕಾರಿಗಳು ಕೂಡ ಬಹಳ ಜನರು ಇದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಾದ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆ. ಆದರೆ ಇಷ್ಟತ್ತಿನವರೆಗೂ ಅಲ್ಲೇನು ಪ್ರೋಗ್ರೆಸ್ ಆಗಿಲ್ಲ. ನೀರಾವರಿ ಇಲಾಖೆಯನ್ನು ಕನ್‌ಸಲ್ಟ್ ಮಾಡುತ್ತೇವೆಂದು ಹೇಳಿದ್ದಾರೆ, ಸಂತೋಷ. ತಮ್ಮ ಇಲಾಖೆಯ ಕಟ್ಟಡವನ್ನು ಯಾರ್ಯಾರೋ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕು. ಫೆಬ್ರವರಿ ತಿಂಗಳಲ್ಲಿ ತಾವು ಬಂದಿದ್ದೀರಿ. ತಮ್ಮ ಅಧಿಕಾರಿಗಳು ಬರೀ ತಪ್ಪು ಮಾಹಿತಿ ಕೊಟ್ಟಿದ್ದಾರೆ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೇ, ಯಾವ ಯಾವ ಫಾರಂಗಳಲ್ಲಿ ಎಷ್ಟೆಷ್ಟು ಕಟ್ಟಡಗಳಿವೆ, ಅದರ ಮಾಹಿತಿಯನ್ನು ನಾವು ತರಿಸಿಕೊಳ್ಳುತ್ತಿದ್ದೇವೆ. ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕೋ ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎ. ರಾಮದಾಸ್ : ಖರ್ಚಿನ ಬಗ್ಗೆ ತನಿಖೆಯನ್ನು ಮಾಡಬೇಕು. ಇಲಾಖೆಯಿಂದ ತನಿಖೆ ಮಾಡಿ ವರದಿ ಕೊಡುವುದಾದರೂ ಆಗಬೇಕು. ತಮ್ಮ ಬಗ್ಗೆ ಯಾವ ವಿಚಾರವನ್ನು ಹೇಳುತ್ತಿಲ್ಲ. ಇಲಾಖೆಯಲ್ಲಿ ಅನಾವಶ್ಯವಾಗಿ ಆಗಿಲ್ಲದೇ ಇರುವ ಖರ್ಚುಗಳೆಲ್ಲವನ್ನು ಕೊಟ್ಟು ಮಾಡಿರುವ ಅವ್ಯವಹಾರವನ್ನು ನೀವೇ ಇಟ್ಟಿದ್ದೀರಿ. ಇದರ ಬಗ್ಗೆ ತನಿಖೆ ಮಾಡಲಿಕ್ಕೆ ಸಮಸ್ಯೆಯೇನು ? ಇದು ಸರ್ಕಾರದ ಹಣ.

ಅಧ್ಯಕ್ಷರು : ಅದನ್ನು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಹದೇವ್ : ತಮ್ಮ ಕಳಕಳಿಯನ್ನು ಸರ್ಕಾರ ಬಹಳ ತೀವ್ರವಾಗಿ ಗಮನಿಸಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಅಗತ್ಯಕ್ರಮ ಕೈಗೊಳ್ಳುತ್ತೇವೆ. ತನಿಖೆ ಅವಶ್ಯಕತೆ ಇದ್ದರೆ ತನಿಖೆಯನ್ನೂ ಮಾಡುತ್ತೇವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಟಿ.ಎಂ.ಸಿ. ಆಸ್ತಿಯ ವಿಲೇವಾರಿ

124 (1227) ಶ್ರೀ ಬಸವರಾಜ್ ಮಂಡಿಮಠ್ ಜಿ (ಚಿಳ್ಳಕೆರೆ): ಮಾನ್ಯ ನಗರಾಭಿವೃದ್ಧಿ ಸಚಿವರು